ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Thursday, the 27th May, 1976. Jyeistha 7, 1898 S.E.

The House met in the Assembly Chamber, Vidhana Soudha, at Nine of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS
(to which Oral Answers were given)

ಸೊರಬ ತಾಲೂಕಿನಲ್ಲಿ ದರಖಾಸ್ತು ಪ್ರಕರಣಗಳನ್ನು ವಿಲೇ ಮಾಡುವುದರಲ್ಲಿ ನಡೆದ ಅಕ್ರಮಗಳು

೧೫೩. ಶ್ರೀ ಕಾಗೋಡು ತಿಮ್ಮಪ್ಪ.—(ಸಾಗರ) ಕಂದಾಯ ಮಂತ್ರಿಗಳು ಈ ವಿಷಯಂಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಸೊರಬ ತಾಲ್ಲೂಕಿನಲ್ಲಿ ಹಿಂದೆ ತಹಶೀಲ್ದಾರರಾಗಿದ್ದ ಶ್ರೀ ಪಂಡಿತ ಎಂಬುವರು ದರಖಾಸ್ತು ವಿಲೇವಾರಿ ಮಾಡುವಲ್ಲಿ ಅನೇಕ ಅಕ್ರಮಗಳನ್ನು ನಡೆಸಿರುವುದು ನಿಜವಲ್ಲವೆ, ಹಾಗಿದ್ದರೆ, ಎಷ್ಟು ಪ್ರಕರಣಗಳಲ್ಲಿ ಈ ರೀತಿ ನಡೆಸಿದ್ದಾರೆ;

(ಆ) ಸದರಿ ಅಧಿಕಾರಿಯು ವರ್ಗ ಆದ ಮೇಲೂ ದರಖಾಸ್ತು ಮಂಜೂರು ಮಾಡಿರುವುದು ನಿಜವೇ ಹಾಗಿದ್ದರೆ, ಎಷ್ಟು ಪ್ರಕರಣಗಳಲ್ಲಿ ಈ ರೀತಿ ಮಂಜೂರು ಮಾಡಿದ್ದಾರೆ;

(ಇ) ಸದರಿ ಅಧಿಕಾರಿಯು ವರ್ಗ ಆದ ಮೇಲೆ ಸಿ.ಆರ್.ಪಿ.ಸಿ. ೧೪೫ರ ಪ್ರಕಾರ ಎಷ್ಟು ಕೇಸು ಗಳಲ್ಲಿ ಆಜ್ಞೆ ಮಾಡಿದ್ದಾರೆ ಮತ್ತು ಆಜ್ಞೆ ಮಾಡಿದ ಎಲ್ಲಾ ಕೇಸುಗಳಲ್ಲಿಯೂ ಗೇಣಿ ಪಗೈರೆ ರೈತರ ವಿರುದ್ಧ ಮಾಡಿರುವುದು ನಿಜವಲ್ಲವೇ,

(ಈ) ಸದರಿ ಅಧಿಕಾರಿಯು ನಡೆಸಿದ ದರಖಾಸ್ತು ಅಕ್ರಮ ವ್ಯವಹಾರದಲ್ಲಿ ಸೇರಿದ್ದ ಇನ್ನಿತರ ಅಧಿಕಾರಿಗಳು ಯಾರು ಮತ್ತು ಸದರಿಯವರುಗಳ ಮೇಲೆ ಈವರೆಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಮಂತ್ರಿಗಳು) —(ಅ) ಮತ್ತು (ಆ) ಇದರ ಬಗ್ಗೆ ಸಿ.ಸಿ.ಎ. ರೂಲ್ಸಿನ ೧೫ನೇ ನಿಯಮದ ಪ್ರಕಾರ ಕ್ರಮಬದ್ಧವಾದ ವಿಚಾರಣೆ ಇನ್ನೂ ಪೂರ್ತಿಯಾಗಿಲ್ಲವಾದ್ದರಿಂದ ಈಗಾಗಲೇ ವಿವರಗಳನ್ನು ಕೊಡಲು ಸಾಧ್ಯವಾಗುವುದಿಲ್ಲ.

(ಇ) ಮತ್ತು (ಈ) ವಿಚಾರಣೆ ಪೂರ್ಣವಾಗದಿರುವುದರಿಂದ ವಿವರ ಕೊಡುವುದು ಸಾಧ್ಯವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ —ಸ್ವಾಮಿ, ದರಖಾಸ್ತು ಮಂಜೂರು ಮಾಡತಕ್ಕ ಸಂದರ್ಭದಲ್ಲಿ ಎಷ್ಟು ಕೇಸಂಗಳಲ್ಲಿ ಅಕ್ರಮ ವ್ಯವಹಾರ ನಡೆದಿದೆ ಎನ್ನುವುದು ಗಮನಕ್ಕೆ ಬಂದಿದೆಯೇ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ನನ್ನ ಹತ್ತಿರ ಇರತಕ್ಕ ವರದಿ ಪ್ರಕಾರ 88 ಕೇಸುಗಳು ಎಂದೂ ಗೊತ್ತಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ 144ರ ಪ್ರೊಸೀಡಿಂಗ್ಸ್ ಪ್ರಕಾರ ಈ ತಹಲ್‌ವರೆಗೆ ಗೇಣಿ ವಗೈರೆ ರೈತರ ವಿರುದ್ಧ ಎಷ್ಟು ಕೇಸುಗಳಲ್ಲಿ ಆಜ್ಞೆ ಮಾಡಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ವಿಷಯ ನನ್ನ ಗಮನಕ್ಕೆ ಬಂದಿಲ್ಲ ವಿಚಾರಣೆ ನಡೆಯುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ ? ವಿಚಾರಣೆ ಆಗುವುದಕ್ಕೆ ಯಾರನ್ನು ನೇಮಿಸಿದ್ದೀರಿ ? ಎಷ್ಟು ಅವಧಿಯಲ್ಲಿ ಮುಗಿಸುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಾಗರದ ಅಸಿಸ್ಟೆಂಟ್ ಕಮೀಷನರ್‌ರವರನ್ನು ಎನ್‌ಕ್ವೈರಿ ಅಧಿಕಾರಿಯಾಗಿ ಗೊತ್ತುಮಾಡಿದ್ದೇವೆ, ಅವರು ವಿಚಾರಣೆ ಮಾಡುತ್ತಿದ್ದಾರೆ.

ಧಾರವಾಡ ಜಿಲ್ಲೆಯಲ್ಲಿ ಬರಗಾಲಕ್ಕೆ ತುತ್ತಾದ ಪ್ರದೇಶಗಳು

೭೫೦. ಶ್ರೀ ವಿ. ವಿ. ವಾಯಿ (ಶಿರಹಟ್ಟಿ).— ಕಂದಾಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

(ಅ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ತಾಲ್ಲೂಕುಗಳು ಬರಗಾಲ ಪೀಡಿತ ಪ್ರದೇಶಗಳೆಂದು ಸಾರಲಾಗಿದೆ ಮತ್ತು ಎಂದಿನಿಂದ ;

(ಆ) ಎಷ್ಟು ತಾಲ್ಲೂಕುಗಳಲ್ಲಿ ಕೇಂದ್ರ ಸರ್ಕಾರದಿಂದ ರೂರಲ್ ವರ್ಕ್ಸ್ ಡಿಪಿಎಪಿ ಮಂಜೂರಾಗಿ ಕೆಲಸ ಪ್ರಾರಂಭವಾಗಿದೆ ;

(ಇ) ಶಿರಹಟ್ಟಿ ತಾಲ್ಲೂಕು ೧೯೬೦ರಿಂದ ೧೯೭೬ರವರೆಗೆ ಏನೂ ಬೆಳೆ ಬಂದಿಲ್ಲವೆಂಬುದು ನಿಜವೇ ;

(ಈ) ಅಂದಿನಿಂದ ಈ ತಾಲ್ಲೂಕಿನಲ್ಲಿ ಮಳೆ ಪ್ರಮಾಣ ಎಷ್ಟು ? ಹಪ್ತೆ ತಹಕೂಬಾದ. ಅರ್ಧ ತಹಕೂಬು ಬಂದ ಹಪ್ತೆ ಸೂಟಿ ಆದ ಹಳ್ಳಿಗಳು ಎಷ್ಟು ? ಆಯಾ ಗ್ರಾಮಗಳ ಆಣೇವಾರಿ ಎಷ್ಟು :

(ಉ) ಧಾರವಾಡ ಜಿಲ್ಲೆಯಲ್ಲಿ ಮಳೆ ಬೆಳೆ ಸರಿಯಾಗಿ ಉತ್ತಮ ಬೆಳೆ ಬಂದರೂ ಅಭಾವ ಪ್ರದೇಶವೆಂದು ಸಾರಿ ಅನೇಕ ಅಭಿವೃದ್ಧಿ ಕಾರ್ಯ, ಡಿಪಿಎಪಿ ಮಂಜೂರು ಮಾಡಿದ ತಾಲ್ಲೂಕುಗಳು ಯಾವುವು :

(ಊ) ಈಗಲಾದರೂ ಶಿರಹಟ್ಟಿ ತಾಲ್ಲೂಕು ಬರಗಾಲ ಪ್ರದೇಶವೆಂದು ಸಾರಿ ಅದಕ್ಕನುಗುಣವಾಗಿ ಕೆಲಸ ಪ್ರಾರಂಭಿಸುವ ವಿಚಾರ ಸರಕಾರಕ್ಕೆ ಇದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳ ಪರವಾಗಿ).—

ಶ್ರೀ ಎನ್. ಚಿಕ್ಕೇಗೌಡ (ವ್ಯವಸಾಯ ಮಂತ್ರಿಗಳು) —

(ಅ) ೧೯೭೦–೭೧ನೇ ಸಾಲಿನಿಂದ ರೋಣ, ಕುಂದಗೋಳ, ಹಾವೇರಿ, ಮುಂಡರಗಿ ಮತ್ತು ರಾಣೆಬೆನ್ನೂರು ತಾಲ್ಲೂಕುಗಳನ್ನು ಅಭಾವ ಪೀಡಿತ ಪ್ರದೇಶಗಳೆಂದು ಪರಿಗಣಿಸಲಾಗಿದೆ.

(ಆ) ಧಾರವಾಡ ಜಿಲ್ಲೆಯಲ್ಲಿ ಐದು ತಾಲ್ಲೂಕುಗಳಲ್ಲಿ ಅಂದರೆ ಕುಂದಗೋಳ, ರಾಣೆಬೆನ್ನೂರು, ಹಾವೇರಿ, ಮುಂಡರಗಿ ಮತ್ತು ರೋಣ ಈ ತಾಲ್ಲೂಕುಗಳಲ್ಲಿ ಡಿಪಿಎಪಿ ಕಾರ್ಯಗಳ ಕೆಲಸಗಳು ನಡೆಯುತ್ತಿವೆ.

(ಇ) ನಿಜವಲ್ಲ

(ಈ) ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ಕೊಡಲಾಗಿದೆ.

(ಉ) ಅಂತಹ ತಾಲ್ಲೂಕುಗಳು ಯಾವುವೂ ಇಲ್ಲ.

(ಊ) ಹಲವು ತಾಲ್ಲೂಕುಗಳನ್ನು ರಾಜ್ಯ ಸರ್ಕಾರದ ಸಂಪನ್ಮೂಲಗಳಿಂದ ಡಿಪಿಎಪಿ ಕಾರ್ಯಕ್ರಮವನ್ನು ಕೈಗೊಳ್ಳುವ ವಿಷಯ ಸರ್ಕಾರದ ತೀವ್ರ ಗಮನದಲ್ಲಿದೆ. ಆ ತಾಲ್ಲೂಕುಗಳ ಪಟ್ಟಿಯಲ್ಲಿ ಶಿರಹಟ್ಟಿ ಸೇರಿರುವುದು

† Indicates that remarks or speeches have not been revised by the member concerned.